DAY — **03** SEAT NUMBER | | | | | | |

2025	II	13	1100	**J-261**	(K)

KANNADA (06)

Time : 3 Hrs. **(12 Pages)** **Max. Marks : 80**

ಸೂಚನೆಗಳು :

1. *ಪ್ರತಿಯೊಂದು ಕೃತಿ ಬಿಡಿಸುವುದು ಅನಿವಾರ್ಯ.*
2. *ಜಾಲಾಕೃತಿಗಳನ್ನು ಪೆನ್ನಿನಿಂದಲೇ ತೆಗೆದು ಉತ್ತರಗಳನ್ನು ಜಾಲಾಕೃತಿಯಲ್ಲಿಯೇ ಬರೆಯಬೇಕು.*
3. *ಪ್ರತಿಯೊಂದು ಹೊಸ ಪ್ರಶ್ನೆಯನ್ನು ಹೊಸ ಪುಟದ ಮೇಲೆಯೇ ಬರೆಯಬೇಕು.*

ಭಾಗ - 1 ಗದ್ಯ (20)

ಪ್ರ.1. (ಅ) ಕೆಳಗಿನ ಗದ್ಯಖಂಡವನ್ನು ಓದಿ ಕೊಟ್ಟ ಕೃತಿಗಳನ್ನು ಪೂರ್ಣಗೊಳಿಸಿರಿ : **(8)**

(1) ಶರಾವತಿಯ ನಾಲ್ಕು ಕವಲುಗಳ ಹೆಸರುಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ : **(2)**



ಶರಾವತಿಯ ಎರಡನೇ ಜಿಗಿತವೇ ಜೋಗ. ತನ್ನ ಪ್ರಯಾಣದ 80ನೇ ಕಿ.ಮೀ. ಬಳಿ ಶರಾವತಿ ನದಿ ಈ ವಿಶ್ವವಿಖ್ಯಾತ ಜಲಪಾತವನ್ನು ಸೃಷ್ಟಿಸಿದೆ. ಇಲ್ಲಿ ನದಿ ನಾಲ್ಕು ಕವಲುಗಳಾಗಿ ಧುಮುಕುತ್ತದೆ. ರಾಜಾ, ರೋರರ್, ರಾಕೆಟ್, ಲೇಡಿಗಳೇ ಈ ನಾಲ್ಕು ಕವಲುಗಳು. ನದಿ 293 ಮೀಟರ್ ಎತ್ತರದಿಂದ ಪ್ರಪಾತಕ್ಕೆ ಧುಮುಕುವುದೇ ಒಂದು ಚೆಂದ.

ಹೆಸರಿಗೆ ತಕ್ಕಂತೆ ರಾಜಾ ಅತೀ ಎತ್ತರದಿಂದ ಧುಮುಕುತ್ತಾನೆ. ಮೇಲೆ ಮೈ ಚಳಿ ಬಿಟ್ಟುಹಾರಿದವನು ನೇರ ಕೆಳಗಿನ ಪ್ರಪಾತಕ್ಕೇನೆ ಬಂದು ಬೀಳುತ್ತಾನೆ. ಅವನ ಧೈರ್ಯ, ದಿಟ್ಟತನ, ಎದೆಗಾರಿಕೆ ಮೆಚ್ಚಬೇಕು. ಆದರೆ ರೋರರ್ ಹಾಗಲ್ಲ. ಆತ ನಡುವೆ ಎಲ್ಲಿಂದಲೋ ಬಂದು ರಾಜನಿಗೆ ತೆಕ್ಕೆ ಬೀಳುತ್ತಾನೆ. ಅಬ್ಬರವೆಲ್ಲ ಅವನದ್ದೇ. ಹೀಗಾಗಿ ಈತನಿಗೆ ರೋರರ್ ಎಂದು ಹೆಸರು. ಮೂರನೆಯ ಜಲಪಾತವೇ ರಾಕೆಟ. ಬಂಡೆಗೆ ಬಡಿದ ನೀರು ಚಿಮ್ಮಿ ಬಿಟ್ಟ ರಾಕೆಟ್ಟುಗಳ ಹಾಗೆ ಕೆಳಗೆ ಬೀಳುವದು ಸುಂದರ ನೋಟ. ನೀರು ಇಲ್ಲಿ ಛಿದ್ರ ಛಿದ್ರವಾಗುತ್ತದೆ. ನಾಲ್ಕನೆಯದಾದ ರಾಣಿ ಹೆಸರಿಗೆ ತಕ್ಕಂತೆ ರಾಣಿಯೇ. ನಡುವೆ ಸಿಗುವ ಬಂಡೆಗಳ ಮೇಲೆ ಮೈ ಚಾಚುತ್ತ . ಬಳುಕಿ ಬಾಗುತ್ತ, ನಿಧಾನವಾಗಿ ರಾಣಿ ಕೆಳಗಿನ ಪ್ರಪಾತಕ್ಕೆ ಇಳಿಯುತ್ತಾಳೆ. ಈ ಹಿಂದೆ ಇಂದಿನ ಲೇಡಿ ಜಲಪಾತಕ್ಕೆ ಡೇವ್ ಬ್ಲಾಂಚಿ ಎಂಬ ಹೆಸರಿನಿಂದ ಕರೆಯುತ್ತಿದ್ದರೆ ಇಂದು ರಾಣಿ ಎಂಬ ಹೆಸರೇ ಜನಪ್ರಿಯವಾಗಿ ಉಳಿದುಬಿಟ್ಟಿದೆ.

ಜೋಗ ಜಲಪಾತದಲ್ಲಿಯ ಈ ವೈವಿಧ್ಯತೆ ಪ್ರಪಂಚದ ಬೇರೆ ಯಾವ ಜಲಪಾತಗಳಲ್ಲೂ ಇಲ್ಲ. ನಯಾಗರ ಜಲಪಾತ ಒಂದೇ ಸಮನೆ ಬೀಳುತ್ತದಲ್ಲದೆ, ಅದರಲ್ಲಿ ವಿಶೇಷತೆ ಇಲ್ಲ. ಹೀಗಾಗಿ ಜೋಗ ಜಲಪಾತಕ್ಕೆ ಒಂದು ಭಿನ್ನತೆ, ವೈಶಿಷ್ಟ್ಯ ಇದೆ.

ಅಲ್ಲದೆ ವಿಶಾಲವಾದ ಕರಿ ಬಂಡೆಯ ಮೇಲೆ ಅದು ನೊರೆ ನೊರೆಯಾಗಿ ಬೀಳುವುದು ನಯನ ಮನೋಹರ. ಮಳೆಗಾಲದಲ್ಲಂತೂ ನಾಲ್ಕು ಜಲಪಾತಗಳು ಒಂದಾಗಿ ಬೀಳುತ್ತವೆ. ರಭಸಕ್ಕೆ ನೆತ್ತಿಯ ಮೇಲಿನ ಬಂಗಲೆಯ ಕಿಟಕಿ, ಬಾಗಿಲುಗಳೂ ಕಂಪಿಸುತ್ತವೆ. ಸುತ್ತ ಮಂಜು ಕವಿದು ಜಲಪಾತದ ಮುಂದೆ ಬಿಳಿ ಮಂಜಿನ ಪರದೆ ಕವಿಯುತ್ತದೆ. ಜನ ಜಲಪಾತ ನೋಡಲು ಗಂಟೆಗಟ್ಟಲೆ ಕಾಯಬೇಕಾಗುತ್ತದೆ.

(2) ಕೆಳಗಿನ ಬಿಟ್ಟ ಸ್ಥಳಗಳನ್ನು ಯೋಗ್ಯ ಶಬ್ದಗಳಿಂದ ತುಂಬಿ ಪೂರ್ಣಗೊಳಿಸಿರಿ : **(2)**

(1) ಹೆಸರಿಗೆ ತಕ್ಕಂತೆ ..... ಅತೀ ಎತ್ತರದಿಂದ ಧುಮುಕುತ್ತಾನೆ.

(2) ..... ಇಲ್ಲಿ ಛಿದ್ರ ಛಿದ್ರವಾಗುತ್ತದೆ.

(3) ಇಂದು ..... ಎಂಬ ಹೆಸರೇ ಜನಪ್ರಿಯವಾಗಿ ಉಳಿದುಬಿಟ್ಟಿದೆ.

(4) ..... ಜಲಪಾತ ಒಂದೇ ಸಮನೆ ಬೀಳುತ್ತದೆ.

(3) ಕೆಳಗಿನ ಶಬ್ದಗಳನ್ನು ಬಿಡಿಸಿ ಸಂಧಿಗಳನ್ನು ಹೆಸರಿಸಿರಿ : **(2)**

(1) ಜಲಪಾತವನ್ನು

(2) ಮಳೆಗಾಲ

(4) ಜೋಗ ಜಲಪಾತದ ವರ್ಣನೆಯನ್ನು **10-12** ಸಾಲುಗಳಲ್ಲಿ ಬರೆಯಿರಿ : **(2)**

(ಬ) ಕೆಳಗಿನ ಗದ್ಯಖಂಡವನ್ನು ಓದಿ, ಕೊಟ್ಟ ಕೃತಿಗಳನ್ನು ಪೂರ್ಣಮಾಡಿರಿ : **(8)**

(1) ಕಸಬರಿಗೆ ಗಣನೆಗೆ ತೆಗೆದುಕೊಳ್ಳಲಾದ ಅಂಶಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ : **(2)**



ನಮ್ಮ ಜಾತಿ-ಮತ-ಪಂಥ-ಪಂಗಡ-ವರ್ಗ-ವರ್ಣ-ಲಿಂಗಗಳೊಂದನ್ನು ಗಣನೆಗೆ ತಾರದೇ ನಮ್ಮೆಲ್ಲರಿಗೂ ಒಂದೇ ರೀತಿಯ ಸ್ವಚ್ಛತೆಯ ಸೇವೆಯನ್ನು ದಯಪಾಲಿಸುವ ನಿನ್ನನ್ನು ನ್ಯಾಯವಾಗಿ ನಮ್ಮ ಮನೆಗಳಲ್ಲಿಯ ಜಗುಲಿಯ ಮೇಲಿಟ್ಟು ಪೂಜಿಸಬೇಕಾಗಿತ್ತು. ಸುಂದರ ವಸ್ತುಗಳೊಂದಿಗೆ ಅಂದದ ಶೋಕೇಸುಗಳಲ್ಲಿಟ್ಟುಕಾಪಾಡಬೇಕಾಗಿತ್ತು. ತಿಪ್ಪೆಯನ್ನು ನಿರ್ಮೂಲನೆ ಮಾಡುವ ನಿನ್ನನ್ನು ಉಪ್ಪರಿಗೆಯ ಮೇಲಿಟ್ಟು ಅಭಿಮಾನ ಪಡಬೇಕಾಗಿತ್ತು. ಆದರೆ ಅದೇನು ನಮ್ಮ ಅಜ್ಞಾನವೋ, ನಿನ್ನ ದುರ್ದೈವವೋ ಯಾರ ಕಣ್ಣಿಗೆ ಬೀಳದಂತೆ ನಿನ್ನನ್ನು ನಮ್ಮ ಮನೆಗಳ ಮೂಲೆಗಳಲ್ಲಿ ಸಂದಿಗೊಂದಿಗಳಲ್ಲಿ, ಮರೆಯಲ್ಲಿ ನೆಟ್ಟಗೆ ನಿಲ್ಲಿಸಿ ಬಿಟ್ಟಿದ್ದೇವೆ. (ಕೂಡಿಸಿಲ್ಲ ಕೂಡ!) ಸಂಕುಚಿತ ಮತಿಗಳಾದ ನಮ್ಮ ಅನುಚಿತ ಸ್ಥಾನಮಾನ ನೀಡಿಕೆಯಿಂದ ಕಿಂಚಿತ್ತೂ ಬೇಸರಿಸದ ನೀನು ಮಾತ್ರ ಕರೆದಾಗೊಮ್ಮೆ ನಮ್ಮ ಕೈಗೂಡಿ ಬರುತ್ತೀ. ನಮ್ಮ ಸೇವೆಗೆ ಯಾವಾಗಲೂ ಸಿದ್ಧವಿರುವ ನೀನು ಒಂದು ದಿನವೂ ರಜೆ ಘೋಷಿಸಿಕೊಂಡಿಲ್ಲ. ಮೂಲೆಗೊತ್ತಿದ್ದನ್ನು ಪ್ರತಿಭಟಿಸಿ ಮುಷ್ಕರ ಹೂಡಿಲ್ಲ. ನಿನ್ನ ಅವಿರಳ ಸೇವೆಗೆ ಪುರಸ್ಕಾರ ಅಪೇಕ್ಷಿಸಿಲ್ಲ. 'ಕೆಲಸ ಮಾತ್ರ ನನ್ನದು. ಫಲದ ಆಕಾಂಕ್ಷೆ ಸಲ್ಲದು ' ಎನ್ನುವ ಗೀತೆಯ ತತ್ವವನ್ನು ಪ್ರತಿಕ್ಷಣ ಪಾಲಿಸುತ್ತಿರುವ ನೀನು ನಿಗರ್ವದ ಶಿಖಿರವಾಗಿದ್ದೀ.

ಮೂಲೆಯಲ್ಲಿಟ್ಟು ನಿನ್ನನ್ನು ಅನ್ಯಾಯವಾಗಿ ಅವಮಾನಿಸಿದ್ದು ಮಾತ್ರವಲ್ಲದೆ ಯಾವುದಾದರೂ ಶುಭ ಕೆಲಸ-ಕಾರ್ಯಗಳಿಗೆ ಹೊರಟಿರುವಾಗ ಆಕಸ್ಮಾತ ನೀನು ಕಣ್ಣಿಗೆ ಬಿದ್ದರೆ ಮುಖ ಕಿವುಚಿ, ಮನಸ್ಸು ಕಹಿಮಾಡಿಕೊಂಡು ಅಪಶಕುವನೆಂದು ಭ್ರಮಿಸಿ ಮಾಡಬೇಕಾದ ಕೆಲಸ ನಿಲ್ಲಿಸಿ ನಿನ್ನನ್ನು , ನೀನು ಕಣ್ಣಿಗೆ ಬೀಳಲು ಕಾರಣರಾದವರನ್ನು ಶಪಿಸುತ್ತೇವೆ. ನಿನ್ನನ್ನು 'ಲಕ್ಷ್ಮೀ ಸ್ವರೂಪಿ' ಎಂದು ತಿಳಿದಿರುವುದು ಕೇವಲ ಮೌಖಿಕ ಗೌರವವಾಗಿರುತ್ತದೆ. ಸಣ್ಣ ಮಕ್ಕಳಿರುವ ಮನೆಯಲ್ಲಿ ನಿನ್ನ ಪಾಡು ದೇವರಿಗೆ ಪ್ರೀತಿ.

(2) ಕೆಳಗಿನ ಪದಗಳನ್ನು ಯೋಗ್ಯ ಅಕ್ಷರಗಳಿಂದ ತುಂಬಿ ಪೂರ್ಣಗೊಳಿಸಿರಿ : (2)

(i) ನಿ ..... ಲ .....

(ii) ಪ್ರ .....ಭ .....ಸಿ

(iii) ಪು.....ಸ್ಕಾ .....

(iv) ಅ.....ಚಿ .....

(3) ಕೊಟ್ಟ ಅಕ್ಷರ ಚೆಂಡಿನಿಂದ ಗದ್ಯದಲ್ಲಿ ಬಂದಿರುವ ನಾಲ್ಕು ಅರ್ಥವತ್ತಾದ ಶಬ್ದಗಳನ್ನು ತಯಾರಿಸಿರಿ : (2)



(4) ಸ್ವಚ್ಛತೆಯ ಸಂಪತ್ತಿನಲ್ಲಿ 'ಕಸಬರಿಗೆಯ' ಮಹತ್ವವನ್ನು ಕುರಿತು 10-12 ವಾಕ್ಯಗಳಲ್ಲಿ ಬರೆಯಿರಿ. (2)

(ಕ) ಕೆಳಗಿನ ಬೇಕಾದ ಒಂದು ಕೃತಿಯನ್ನು 100-200 ಶಬ್ದಗಳಷ್ಟು ಉತ್ತರ ಬರೆಯಿರಿ : **(4)**

(1) ಮನುಷ್ಯನ ಜೀವನದಲ್ಲಿ ಯೋಗಾಸನದ ಮಹತ್ವವನ್ನು ಕುರಿತು ಬರೆಯಿರಿ.

(2) ಶಾಸ್ತ್ರಿಗಳು ಮಾದನ ಮೂರ್ಖತನದ ಲಾಭ ಪಡೆದ ಬಗೆಯನ್ನು ವಿವರಿಸಿರಿ.

(3) ''ಸೋಲೆ ಗೆಲುವಿನ ಮೆಟ್ಟಿಲು'' ಎಂಬುದನ್ನು ಮೇರಿಕೋಮಳ ಜೀವನ ದೃಷ್ಟಾಂತ ಆಧಾರದ ಮೇಲೆ ಬರೆಯಿರಿ.

ಭಾಗ - 2 ಪದ್ಯ (16)

ಪ್ರ 2 **(ಅ)** ಕೆಳಗಿನ ಪದ್ಯಭಾಗವನ್ನು ಓದಿ ಕೊಟ್ಟ ಕೃತಿಗಳನ್ನು ಪೂರ್ಣ ಮಾಡಿರಿ : **(8)**

(1) ಕವಿಯ ಮನೆಯ ಗುಣಲಕ್ಷಣಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ : (2)



ದೂರದ ಮುಂಬಯಿ ಬಿಟ್ಟು
ನೆಮ್ಮದಿಯ ನೆಲೆಗಾಗಿ
ಕೊಂಡುದಾಯಿತು ಒಳನಾಡಿನೊಳಗೊಂದು ಮನೆ

ಮಾಡಿಕೊಂಡದ್ದಾಯ್ತು
ನಮಗೆ ಬೇಕಾದಂತೆ ಒಂದಿಷ್ಟು ಬದಲಾವಣೆ
ಸುತ್ತಲೆಲ್ಲಾ ಹಸಿರು ಗಿಡ-ಮರ-ಬಳ್ಳಿ
ನಡುವೆ ಸಿಮೆಂಟಿನ ವಾಸ್ತು
ಪ್ರಕೃತಿಯಾವರಣದಲಿ
ನಾಗರಿಕತೆ ಕಲ್ಲು - ಗಾರೆಗೆ ಕಲಸಿದಂಥ ಶಿಸ್ತು !
ಅತ್ತ ದೊಡ್ಡದು ಅಲ್ಲ ಇತ್ತ ಸಣ್ಣದು ಅಲ್ಲ
ಚಿಕ್ಕ ಪರಿವಾರಕ್ಕೆ ಹೇಳಿ ಮಾಡಿಸಿದಂಥ
ಚೊಕ್ಕ ನಕ್ಷೆಯ ಬೀಡು
ನೆಮ್ಮದಿಯ ಬಾಳುವೆಗೆ ಬೇರೇನು ಈಡು ?
ನಾವಿಲ್ಲಿ ನೆಲೆ ನಿಂತು ದಿನಗಳುರುಳಿದ ಹಾಗೆ
ಆತ್ಮೀಯ ವರ್ತುಳದ ಆಪ್ತ ಮಿತ್ರರು ಬಂದು
ನಮ್ಮ ಕ್ಷೇಮಕ್ಕೆ ಹಾರೈಕೆ ನೀಡುವರು
ಮನೆಯ ಒಳ ಹೊರಗೆಲ್ಲ ಮೈಗೊಡಿಕೊಂಡಿರುವ
ಒಪ್ಪ-ಓರಣ ಕಂಡು ಬಾಯ್ತುಂಬ ಕೊಂಡಾಡುವರು
ನೋಡು ನೋಡುತ ಹೊಳೆದ ಸಲಹೆ-ಸೂಚನೆ ನೀಡಿ
ನಮ್ಮ ಹಿತಚಿಂತನೆಗೆ ನುಡಿಗೊಡುವರು !
ಮುಗುಳುನಗೆ ಮಮತೆಯ ಮಾತುಗಳನೆಲ್ಲ ಮುಗಿಸಿ
ಹೊರತು ಹೋಗುವ ಮುನ್ನ ಅಂಗಳದಿ ನಿಂತು
ಪ್ರೀತಿಯಿಂದಲೆ ನಮಗೆ ಪ್ರಶ್ನೆ ಕೇಳುವರಿಂತು :
''ಏನ್ರೀ, ಯೋಕೆ ತೆಗೆಸಿಯೇ ಇಲ್ಲ
ಮೊದಲಿದ್ದ ಮನೆಯವರ ಈ ತುಳಸಿಕಟ್ಟೆ ''

(2) ಗುಂಪಿಗೆ ಸೇರದ ಪದ ಆಯ್ದು ಬರೆಯಿರಿ : **(2)**

(i) ಮುಂಬಯಿ, ಬೆಂಗಳೂರು, ನಾಗಪೂರ, ಲಾತೂರ
(ii) ಮನೆ, ವಸತಿ, ಶಾಲೆ, ನಿವಾಸ
(iii) ಗಿಡ, ಮರ, ಮನೆ, ಬಳ್ಳಿ
(iv) ಮಿತ್ರರು, ಆಪ್ತರು, ಬಂಧುಗಳು, ಶತ್ರುಗಳು

(3) ಕೆಳಗಿನ ಸಮಾಸ ಪದಗಳನ್ನು ವಿಗ್ರಹಿಸಿ ಹೆಸರಿಸಿರಿ : **(2)**

(i) ಗಿಡ-ಮರ
(ii) ಮೈಗೂಡು

(4) ಜಾತಿ, ಮತ-ಧರ್ಮಕ್ಕಿಂತಲೂ ಮಾನವಿಯತೆ ಮುಖ್ಯವೆಂಬುದರ ಕುರಿತು 10-12 ವಾಕ್ಯಗಳಲ್ಲಿ ಬರೆಯಿರಿ. **(2)**

(ಬ) ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಪೂರ್ಣ ಮಾಡಿರಿ : **(8)**

(1) 'ಹ' ಅಕ್ಷರದಿಂದ ಪ್ರಾರಂಭವಾಗುವ ಶಬ್ದಗಳನ್ನು ಪದ್ಯದಿಂದ ಆಯ್ದು ಬರೆಯಿರಿ : **(2)**



ಕಲ್ಲು ಮುಳ್ಳುಗಳ ಹಾಕಬೇಡಿ
ನಾವು ನಡೆವ ಹಾದಿಯಲ್ಲಿ
ನಿಮ್ಮ ಮನೆಯಂಗಳ
ಗುಡಿಸಿ ಸಾರಿಸಿ
ಬಿರುಕಾಗಿವೆ ಅಂಗಾಲುಗಳು
ಮುಂದೆಮುಂದೆ
ಸಾಗುವ ಇಚ್ಛೆ ಮನದಲಿ
ಕಟ್ಟಬೇಡಿ ಮಣ್ಣು ಇಟ್ಟಿಗೆಗಳ
ಎತ್ತರದ ಗೋಡೆಗಳ
ಹತ್ತಲಾರೆವು ನಾವು
ಹತ್ತು ಮೊಳದ ಮಡಿ
ಬಟ್ಟೆಯ ಬಂದಿಗಳು
ಮೇಲೆ ನಿಂತು
ಆಗಸದ ಚುಕ್ಕಿಗಳ
ಎಣಿಸುವ ಬಯಕೆ
ಇದೀಗಲೇ ಮೂಡುತಿದೆ
ಹೊಂಚು ಹಾಕಿ ಹಿಂದಿನಿಂದ
ದೂಡದಿರಿ ಆಳಕ್ಕೆ
ನಮ್ಮ ಗೋರಿಗಳ ಮೇಲೆ
ಮಹಲು ಕಟ್ಟುವಾಸೆಯ
ದೂರವಿರಿಸಿ ಕೊಂಚ
ಒಲೆಯನಿಕ್ಕಿ ಬೆಂಕಿ ಹಚ್ಚಿ
ನಿಮ್ಮ ಮನೆಯ ಅಂಗಳದ
ಕುಸುಮಗಳಿಗೆ ಭೋಜನವಿಕ್ಕುವಾಸೆ ನಮ್ಮಲ್ಲಿ
ಬೇಡ ನಿಮಗೆ ನಮ್ಮ ಒಲೆಗಳಲ್ಲಿ
ಬೇಳೆ ಬೇಯಿಸಿ ಕೊಳ್ಳುವ ಸಂಚು

ನಾವಿಟ್ಟ ಒಲೆ
ನಾವ್ಕೊಟ್ಟ ಬೆಂಕಿ
ನೀರೆರಚಬೇಡಿ ತಣ್ಣಗೆ
ಒಮ್ಮೆ ತಣ್ಣಗಾದ ಒಲೆ
ಮತ್ತೊಮ್ಮೆ ಉರಿಯಲು
ಬೇಕು ಬಹಳಷ್ಟು ಕಾಲ
ನಿಮ್ಮ ಮನೆಯ ಅಂಗಳದ ಕುಸುಮಗಳಿಗೆ
ಭೋಜನವಿಕ್ಕುವಾಸೆ ನಮ್ಮಲ್ಲಿ
ತನ್ನಿ ಬಣ್ಣದ ಊದುಗೊಳವೆ
ತನ್ನಿ ಹಚ್ಚ ಹಸಿರು ತರಕಾರಿ
ಹೊಚ್ಚ ಹೊಸದು ಫಲ ತಾಂಬೂಲ

(2) ಹೊಂದಿಸಿ ಬರೆಯಿರಿ : **(2)**

'ಅ'	'ಬ'
(1) ಬಿರುಕಾಗಿವೆ	(ಅ) ನೀರೆರಚಬೇಡಿ
(2) ಕುಸುಮಗಳಿಗೆ	(ಬ) ಎಣಿಸುವ ಬಯಕೆ
(3) ಆಗಸದ ಚುಕ್ಕೆಗಳ	(ಕ) ಭೋಜನವಿಕ್ಕುವಾಸೆ
(4) ನಾವ್ಕೊಟ್ಟ ಬೆಂಕಿ	(ಡ) ಅಂಗಾಲುಗಳು

(3) ಕೆಳಗಿನ ಪದಗಳ ತತ್ಸಮ-ತದ್ಭವ ಗುರುತಿಸಿ ಹೆಸರಿಸಿರಿ : **(2)**

(1) ಆಗಸ = ☐

(2) ಬಣ್ಣ = ☐

(4) ''ಕಲ್ಲು ಮುಳ್ಳುಗಳ ಹಾಕಬೇಡಿ ನಾವು ನಡೆವ ಹಾದಿಯಲಿ'' ಈ ಕವಿತೆಯ ಸಾರಾಂಶ **10-12** ವಾಕ್ಯಗಳಲ್ಲಿ ಬರೆಯಿರಿ. **(2)**

ಸ್ಥೂಲ ಅಭ್ಯಾಸ (4)

ಪ್ರ. 3. ಕೆಳಗಿನ ಗದ್ಯಖಂಡವನ್ನು ಓದಿ, ಕೊಟ್ಟ ಕೃತಿಗಳನ್ನು ಪೂರ್ಣಗೊಳಿಸಿರಿ :

(1) ಕಾದಂಬರಿಗಳ ವಿಧಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ : **(2)**



ಹೊಸಗನ್ನಡ ಸಾಹಿತ್ಯದ ಜನಪ್ರಿಯ ರೂಪ ಕಾದಂಬರಿ. ಇದು ಇಂಗ್ಲೀಷ್‌ನ ನಾವೆಲ್‌ಗೆ ಸಂವಾದಿಯಾಗಿ ಬಳಕೆಯಾಗಿದೆ. 'ತುಂಬಾ ಕಲಾತ್ಮಕವಾದ, ಸಾಕಷ್ಟು ದೀರ್ಘವಾದ, ಗದ್ಯರೂಪದಲ್ಲಿರುವ, ಹಲವಾರು ಅಧ್ಯಾಯಗಳು, ಸಾಕಷ್ಟು ಕುತೂಹಲವನ್ನು ಹುಟ್ಟಿಸುವ ಆರಂಭದಿಂದ ರಮಣೀಯ ಮುಕ್ತಾಯವನ್ನು ಹೊಂದಿರುವ ಕಥನ ಕಲೆ ' ಎಂಬುದು ಕಾದಂಬರಿಯ ಸ್ಥೂಲ ಸ್ವರೂಪವಾಗಿದೆ.ಎಲ್.ಎಸ್.

ಶೇಷಗಿರಿರಾವ್‌ರವರು 'ಕಾದಂಬರಿಯು ಸಮಾಜದ ಹಾಗೂ ಸಮಾಜದ ಅಂಗಭೂತನಾದ ಮನುಷ್ಯನ ಚರಿತ್ರೆ ನಡವಳಿಕೆಯಲ್ಲಿ ಕಂಡುಬರುವ ದುರ್ನಡತೆ ಮುಂತಾದವುಗಳನ್ನು ಉದಾಹರಣೆಗಳೊಂದಿಗೆ ಚಿತ್ರಿಸಿ ಪ್ರತಿ ಒಬ್ಬನೂ ಸದ್ಭಾವದಿಂದ ನಡೆದುಕೊಳ್ಳುವದನ್ನು ತೋರ್ಪಡಿಸತಕ್ಕದ್ದಾಗಿದೆ ' ಎಂದಿದ್ದಾರೆ.

ಕಾದಂಬರಿಗಳಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ವೈಜ್ಞಾನಿಕ ಕಾದಂಬರಿಗಳೆಂದು ವಿಂಗಡಿಸಲಾಗುತ್ತದೆ.

ಕನ್ನಡಕ್ಕೆ ಮೊಟ್ಟಮೊದಲ ಕಾದಂಬರಿಯನ್ನು ಪರಿಚಯಿಸಿದವರು ಗುಲ್ವಾಡಿ ವೆಂಕಟರಾಯರು (ಇಂದಿರಾ). ಬಿ. ವೆಂಕಟಾಚಾರ್ಯರು ಬಂಗಾಳಿ ಭಾಷೆಯಿಂದ ದುರ್ಗೇಶ ನಂದಿನಿ, ಆನಂದಮಠ, ದೇವಿ ಚೌದುರಾಣಿ, ವಿಷವೃಕ್ಷ ಮುತಾದ ಕಾದಂಬರಿಗಳನ್ನು ಅನುವಾದಿಸಿದರು. ಆಧುನಿಕ ಕನ್ನಡದಲ್ಲಿ ಕಾದಂಬರಿ ಪ್ರಕಾರವು ಅನುವಾದಗಳ ಮೂಲಕವೇ ಆರಂಭವಾಯಿತು.

ಕನ್ನಡದ ಮೊದಲ ಸ್ವತಂತ್ರ ಕಾದಂಬರಿ **1892** ರಲ್ಲಿ ಲಕ್ಷ್ಮಣರಾವ್ ಗದಗಕರರ 'ಸೂರ್ಯಕಾಂತ'ಮೊದಲ ಕಾದಂಬರಿ ಎಂದು ವಿದ್ವಾಂಸರು ಗುರುತಿಸಿದ್ದಾರೆ. **1899**ರಲ್ಲಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಪ್ರಕಟವಾಯಿತು.

(2) ಹೊಸಗನ್ನಡ ಸಾಹಿತ್ಯದಲ್ಲಿ ಕಾದಂಬರಿಯ ಪಾತ್ರದ ಕುರಿತು **10-12** ವಾಕ್ಯಗಳಲ್ಲಿ ಬರೆಯಿರಿ. **(2)**

ವ್ಯಾಕರಣ (10)

ಪ್ರ.4. ಕೆಳಗಿನ ಕೃತಿಗಳನ್ನು ಸೂಚನೆಯಂತೆ ಪೂರ್ಣಗೊಳಿಸಿರಿ :

(1) ಬೇಕಾದ ಎರಡರ ಸಮಾಸಗಳನ್ನು ವಿಗ್ರಹಿಸಿ (ಬರೆಯಿರಿ) ಹೆಸರಿಸಿರಿ : **(2)**
(i) ಕೌರವೇಂದ್ರ (ii) ಕಣ್ಗೆಡು (iii) ಅರಮನೆ

(2) ಬೇಕಾದ ಎರಡು ಪದಗಳ ರೂಪನಿಷ್ಪತ್ತಿ ಬರೆಯಿರಿ : **(2)**
(i) ಆಶ್ಚರ್ಯ (ii) ದ್ಯಾವ್ರೇ (iii) ಫಸ್ಟಕ್ಲಾಸ

(3) ಕೆಳಗಿನ ಅಲಂಕಾರ ಗುರುತಿಸಿ ಹೆಸರಿಸಿರಿ : **(2)**
ಆ ಧ್ವನಿಯಿಂದ ಅವನು ರುದ್ಧಕಂಠನಾಗಿದ್ದಂತೆ ಬೋಧೆಯಾಯಿತು.

ಅಥವಾ

ಅಪಹ್ನುತಿ ಅಲಂಕಾರದ ಲಕ್ಷಣ ಹೇಳಿ ಉದಾಹರಣೆ ಬರೆಯಿರಿ.

(4) ಕೆಳಗಿನ ಸಾಲಿಗೆ ಪ್ರಸ್ತಾರ ಹಾಕಿ ಛಂದಸ್ಸನ್ನು ಗುರುತಿಸಿ ಹೆಸರಿಸಿರಿ : (2)

ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳ ಮೇಕೇ ನೀಂ ಪಳಂ

ಅಥವಾ

ಭಾಮಿನಿ ಷಟ್ಪದಿಯ ಲಕ್ಷಣ ಹೇಳಿ ಉದಾಹರಣೆ ಬರೆಯಿರಿ.

(5) ಕೆಳಗಿನ ಸಾಲುಗಳಿಗೆ ಪ್ರಸ್ತಾರ ಹಾಕಿ ಛಂದಸ್ಸನ್ನು ಗುರುತಿಸಿ ಬರೆಯಿರಿ : (2)

ಆದಿಯೊಳವರಂ ಪಿರಿದೊಂ

ದಾದರದಿಂ ನಡಪದಜ್ಜರಪ್ಪು ದರಿಂದಂ !

ಅಥವಾ

ತ್ರಿಪದಿಯ ಲಕ್ಷಣ ಬರೆದು ಉದಾಹರಣೆ ಕೊಡಿರಿ.

ಬರವಣಿಗೆಯ ಕೌಶಲ್ಯಗಳು (30)

ಪ್ರ.5. (ಅ) ಕೆಳಗಿನ ಪ್ರತಿಯೊಂದು ಕೃತಿಯನ್ನು 120-150 ಶಬ್ದಗಳಲ್ಲಿ ಉತ್ತರಿಸಿರಿ :

(1) ಪತ್ರಲೇಖನ (5)

★ ಪತ್ರದ ಪ್ರಾರಂಭ

★ ಪತ್ರದ ಉದ್ದೇಶ

★ ವಿಷಯದ ವಿವರಣೆ

ನಿಮ್ಮ ಊರಿನಲ್ಲಿ ವನ್ಯ ಮಹೋತ್ಸವದ ಆಚರಣೆ ಮತ್ತು ವನ್ಯವೃದ್ಧಿ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವಿರಿ. ಆರೋಗ್ಯದ ಸಂವರ್ಧನೆಯಲ್ಲಿ, ವೈದ್ಯಕೀಯ ಔಷಧದ ಸಂಪತ್ತಿನಲ್ಲಿ, ವನ್ಯ ಜೀವಿಗಳ ರಕ್ಷಣೆಯಲ್ಲಿ, ವನ್ಯದ ಮಹತ್ವ ತಿಳಿಸುವುದು, ವನ್ಯರಹಿತ ಜೀವನದ ದುಷ್ಪರಿಣಾಮಗಳನ್ನು ತಿಳಿಸುವುದು, ''ಕಾಡನ್ನು ಉಳಿಸಿ, ನಾಡನ್ನು ಬೆಳೆಸಿ'' ''ಕಾಡು ಹಸಿರಾದರೆ ನಾಡಿಗೆ ಉಸಿರು'' ಎನ್ನುವ ಜಾಗೃತಿಯ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು, ಮೂಲಭೂತ ಅವಶ್ಯಕ ವಸ್ತುಗಳ ಪೂರೈಕೆಯಲ್ಲಿ ವನ್ಯದ ಪಾತ್ರವನ್ನು ಜನರಿಂದ - ಜನರಿಗಾಗಿ - ಜನರಿಗೋಸ್ಕರ ಎನ್ನುವ ವಾಣಿಯನ್ನು ಮನೆ-ಮನೆಗಳಿಗೆ, ಮನ-ಮನಗಳಿಗೆ ಮುಟ್ಟಲು ''ವನ್ಯಮಹೋತ್ಸವ ''ಕಾರ್ಯಕ್ರಮದ ಮೂಲಕ ಪ್ರಚಾರ ಮಾಡಲು ಬರಬೇಕೆಂದು ಕೇಳಿಕೊಂಡು ಅರಣ್ಯಾಧಿಕಾರಿಗಳಿಗೆ ವಿನಂತಿ ಪತ್ರವನ್ನು ಬರೆಯಿರಿ.

ಅಥವಾ

ಈ ಮೇಲಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ''ವನ್ಯ ಸಂರಕ್ಷಣೆಯ'' ಮಹತ್ವಈ ವಿಷಯದ ಕುರಿತು ಚರ್ಚಿಸುತ್ತಾ ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.

(2) ಸಾರಸಂಗ್ರಹ ವಿಸ್ತರಣೆ : (5)

''ಮನಸಿದ್ದರೆ ಮಾರ್ಗ'' ಈ ಗಾದೆ ಮಾತಿನಂತೆ ಕೈಕಟ್ಟಿ ಕುಳಿತುಕೊಂಡರೆ ಆಗುವುದಿಲ್ಲ. ಯಾರಲ್ಲಿ ಛಲ, ಆಸಕ್ತಿ, ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ,

ಗುರಿಯನ್ನು ಮುಟ್ಟುವ, ಸಾಧನೆಯನ್ನು ಮಾಡುವ ಹೆಬ್ಬಯಕೆ ಇರುತ್ತದೆಯೋ ಅವರು ಬಹು ಬೇಗನೆ ಶಿಖರದೆತ್ತರಕ್ಕೆ ಬೆಳೆಯುತ್ತಾರೆ. ಮಾಡಲು ಮನಸ್ಸು - ಶಕ್ತಿ - ಯುಕ್ತಿ ಇದ್ದು, ಸೋಮಾರಿತನ ಬಂದರೆ, ಆಸೆ-ಆಕಾಂಕ್ಷೆಗಳು, ಅಭಿಲಾಷೆಗಳು ಇಲ್ಲದೆ ಹೋದರೆ ಜೀವನದಲ್ಲಿ ಮುಂದೆ ಬರಲು ಸಾಧ್ಯವಿಲ್ಲ. ಸಾಧಿ -ಸಬೇಕೆನ್ನುವವರಿಗೆ ಹಲವಾರು ಯಶಸ್ಸಿನ ಬಾಗಿಲುಗಳು ತೆರೆದಿರುತ್ತವೆ ಎನ್ನುವ ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

(3) ಭಾಷಣ ಲೇಖನ : (5)

★ ಪ್ರಾರಂಭ
★ ಉದ್ದೇಶ
★ ವಿಷಯದ ಮಹತ್ವ
★ ವಿವರಣೆಯ ಅಂಶಗಳು
★ ಸ್ವಾತಂತ್ರ್ಯೋತ್ಸವದ ವಿವರಣೆ
★ ಸ್ವಾತಂತ್ರ್ಯ ಲಭ್ಯವಾದಾಗ ನಮ್ಮ ಮುಂದೆ ಇದ್ದ ಸಮಸ್ಯೆಗಳು
★ ಗ್ರಾಮ ಸ್ವರಾಜ್ಯದ ಕನಸು
★ ಶಿಕ್ಷಣಕ್ಕೆ ನೀಡಿದ ವಿಶೇಷ ಮಹತ್ವ
★ ಕೃಷಿ ರಂಗದಲ್ಲಿ ಆದ ಪರಿವರ್ತನೆ
★ ಔದ್ಯೋಗಿಕದಲ್ಲಿ ಆದ ಕ್ರಾಂತಿ
★ ಅಂತರ್ಜಾಲದಲ್ಲಿ ಆದ ಬದಲಾವಣೆ
★ ವ್ಯವಹಾರಿಕವಾಗಿ ಮಾಡಿದ ಸಾಧನೆ
★ ಅಂತರರಾಷ್ಟ್ರೀಯ ಸಂಬಂಧ
★ ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ
★ ಕಲಾರಂಗದ ವೈವಿಧ್ಯತೆಯ ವೈಶಿಷ್ಟ್ಯ
★ ಸಾರಿಗೆಯಲ್ಲಾದ ಸಮಗ್ರತೆ
★ ನಗರೀಕರಣದ ಪ್ರಭಾವ
★ ಆಧುನೀಕರಣಕ್ಕೆ ನೀಡಿದ ಒಲವು

ಇತ್ಯಾದಿ ಕ್ಷೇತ್ರಗಳಲ್ಲಿ ಆದ ಬದಲಾವಣೆಯ ಅಂಶಗಳ ಸಹಾಯದೊಂದಿಗೆ ''ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಾಧನೆ'' ಈ ವಿಷಯದ ಕುರಿತು ಭಾಷಣ ಲೇಖನವನ್ನು ಸಿದ್ದಗೊಳಿಸಿರಿ.

(ಬ) ಕೆಳಗಿನ ಪ್ರತಿಯೊಂದು ಕೃತಿಯನ್ನು **180-200** ಶಬ್ದಗಳಲ್ಲಿ ಪೂರ್ಣಗೊಳಿಸಿರಿ : (5)

(1) ಸ್ವ-ಪರಿಚಯ ಪತ್ರ :

ಭಾರತೀಯ ನೌಕಾಪಡೆಯಲ್ಲಿ ಕಾರ್ಯನಿರ್ವಾಹಕ ಹುದ್ದೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆಯಲಾಗಿದೆ. ಅದಕ್ಕೆ ಸಂಬಂಧಿಸಿದ ಅರ್ಹತೆಯ ಅಂಶಗಳನ್ನು ಕೆಳಗಿನ ಅಂಶಗಳ ಸಹಾಯದೊಂದಿಗೆ ಸ್ವ-ಪರಿಚಯ ಪತ್ರ ಸಿದ್ಧಪಡಿಸಿರಿ.

★ ಪೂರ್ಣ ಹೆಸರು ★ ವಿಳಾಸ

★ ಜನ್ಮ ದಿನಾಂಕ
★ ವಿದ್ಯಾರ್ಹತೆ
★ ಪಡೆದ ಗುಣಗಳು
★ ಭಾಷೆಯ ವಿವರ
★ ಕಂಪ್ಯೂಟರ್ ಜ್ಞಾನ
★ ಸಾಮಾಜಿಕ ಸೇವೆ
★ ವಿಶೇಷ ಹವ್ಯಾಸಗಳು
★ ದೂರವಾಣಿ ಸಂಖ್ಯೆ
★ ಇ-ಮೇಲ್ ವಿಳಾಸ
★ ದೈಹಿಕ ಅರ್ಹತೆಗಳು
★ ಇತರ ವಿಷಯಗಳು

ಅಥವಾ

ಸಂಭಾಷಣೆ ಲೇಖನ :

ಬಾಲ ಅಪರಾಧ ಚಟುವಟಿಕೆಗಳು ಸಮಾಜದಲ್ಲಿ ವಿಪರಿತವಾಗಿದ್ದು, ಅವುಗಳ ನಿಗ್ರಹಕ್ಕೆ ಬೇಕಾದ ಜಾಗೃತಿಯ ಕ್ರಮಗಳನ್ನು ವಿವರಿಸಲು ಬಂದಿರುವ ಅಪರಾಧ ನಿಗ್ರಹ ದಳದ ಅಧಿಕಾರಿಯೊಂದಿಗೆ ನಡೆಸಿದ ಸಂಭಾಷಣೆಯನ್ನು ಕೆಳಗಿನ ಅಂಶಗಳ ಸಹಾಯದಿಂದ ಬರೆಯಿರಿ.

★ ಸಂಭಾಷಣೆಯ ಪ್ರಾರಂಭ
★ ಅಪರಾಧದ ಕುರಿತು ನೀವು ಮತ್ತು ಅಧಿಕಾರಿಯೊಂದಿಗೆ ಮಾಡಿದ ಸಂಭಾಷಣೆ
★ ಅಪರಾಧಗಳಿಗೆ ಕಾರಣಗಳು
★ ನಿಯಂತ್ರಣಗೊಳಿಸಲು ಉಪಾಯಗಳು
★ ಜನಜಾಗೃತಿಯಿಂದ ಸಾಧ್ಯವೇ ?
★ ಸುದ್ದಿ ಮಾಧ್ಯಮಗಳಲ್ಲಿ ಕೊಡಬೇಕೆ
★ ರಕ್ಷಣಾ ದಳದ ಕಾರ್ಯ ಹೆಚ್ಚಾಗಬೇಕೆ

(2) ವರದಿ ಲೇಖನ : (5)

ನಿಮ್ಮ ಕಾಲೇಜಿನಲ್ಲಿ ಆಚರಿಸಿದ ''ಗಣರಾಜ್ಯೋತ್ಸವ'' ಕಾರ್ಯಕ್ರಮದ ವರದಿಯನ್ನು ಕೆಳಗಿನ ಅಂಶಗಳ ಸಹಾಯದೊಂದಿಗೆ ದೈನಿಕ ಪತ್ರಿಕೆಗಳಲ್ಲಿ ಪ್ರಕಟಿಸಲು ವರದಿಯನ್ನು ಸಿದ್ಧಪಡಿಸಿರಿ.

★ ವರದಿಯ ಪ್ರಾರಂಭ
★ ಮುಖ್ಯ ಉದ್ದೇಶ
★ ವಿಷಯ ವಿವರಣೆ
★ ಧ್ವಜಾರೋಹಣ ಸಮಾರಂಭ
★ ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತೆಗಳು
★ ವಿದ್ಯಾರ್ಥಿಗಳಿಂದ ಭಾಷಣ
★ ಶಿಕ್ಷಕರಿಂದ ಭಾಷಣ
★ ಅತಿಥಿಗಳಿಂದ ಭಾಷಣ
★ ಅಧ್ಯಕ್ಷರಿಂದ ಭಾಷಣ
★ ತ್ಯಾಗ-ಬಲಿದಾನಗಳ ನಾಟಕಗಳು
★ ಹೋರಾಟಗಾರರ ನೃತ್ಯಗಳು
★ ವಂದನಾರ್ಪಣೆ
★ ವಂದೇ ಮಾತರಂ

ಅಥವಾ

ಜಾಹಿರಾತು ಲೇಖನ :

ನೀವು ವಾಸಿಸುವ ಪ್ರದೇಶದಲ್ಲಿ '' ಪುಸ್ತಕ ಮತ್ತು ಅಧ್ಯಯನ ಸಲಕರಣೆ''ಗಳ ಮಾರಾಟ ಮಳಿಗೆ ಈ ಜಾಹಿರಾತು ಆಗಮಿಸಿದೆ. ವಿಶೇಷ ರಿಯಾಯತಿ ದರದಲ್ಲಿ

ಪ್ರಸ್ತುತ ಪಡಿಸುತ್ತಿದೆ ಎಂಬುದನ್ನು ಕೆಳಗಿನ ಅಂಶಗಳ ಆಧಾರದ ಮೇಲೆ ಜಾಹಿರಾತು ಲೇಖನವನ್ನು ತಯಾರಿಸಿರಿ.

★ ಜಾಹಿರಾತಿನ ಚೌಕಟ್ಟು
★ ಶೀರ್ಷಿಕೆ
★ ಸ್ಥಳ
★ ದಿನಾಂಕ
★ ವೇಳೆ
★ ವೈಶಿಷ್ಟ್ಯಗಳು
★ ವಿಳಾಸ
★ ದೂರವಾಣಿ ಸಂಖ್ಯೆ
★ ಇ-ಮೇಲ್ ಆಯ್ಡಿ
★ ಮಾರಾಟದ ಕಾಲಾವಧಿ

(3) ಕೆಳಗಿನ ಗದ್ಯಖಂಡವನ್ನು ಓದಿ ಒಂದೇ ವಾಕ್ಯದಲ್ಲಿ ಉತ್ತರ ಬರುವ ಐದು ಪ್ರಶ್ನೆಗಳನ್ನು ತಯಾರಿಸಿರಿ : (5)

ಧರ್ಮವೆಂದರೆ ಸಮಾಜದ ಪ್ರಗತಿಪರ ಸುಖ, ಸ್ವಾಸ್ಥ್ಯಪೂರ್ಣ ಮತ್ತು ಸುಸಂರಕ್ಷಿತ ಜೀವನಕ್ಕೆ ಪೋಷಕವಾಗುವಂತಹ ಕರ್ತವ್ಯಗಳು, ಆಚಾರಗಳು, ಆಯಾ ಕಾಲಕ್ಕೆ ಅನುಸಾರವಾಗಿ ಆಯಾ ಪರಿಸ್ಥಿತಿಗೆ ಅನುರೂಪವಾಗಿ ವ್ಯಕ್ತಿ ಹಾಗೂ ವ್ಯಕ್ತಿಗಳ ಸಮೂಹಕ್ಕೆ ಇರುವ ಚೌಕಟ್ಟು. ಇದರಲ್ಲಿ ಶಾಶ್ವತತೆ ಸ್ವಲ್ಪಮಟ್ಟಿಗೆ ಇದ್ದರೆ ನಂತರ ಅಷ್ಟೇ ಪರಿವರ್ತನಶೀಲತೆಯೂ ಇರುತ್ತದೆ. ಧನಲೋಭ, ಪರಾವಲಂಭಿ, ಪ್ರವೃತ್ತಿ, ಇತರರ ಸುಖ ದು:ಖದ ಉಪೇಕ್ಷೆ ಈ ಅವಗುಣಗಳು ವ್ಯಕ್ತಿ ಹಾಗೂ ಸಮಾಜದ ಕೆಡುಕಿಗೆ ಕಾರಣವಾಗುವುದರಿಂದ ಜೀವನವು ಮೂಲ್ಯ ಹೀನವಾಗುತ್ತದೆ. ಅಧರ್ಮ ಬೆಳೆಯುತ್ತದೆ. ತ್ಯಾಗ, ಸೇವೆ ನಿಸ್ವಾರ್ಥ, ಇತರರಿಗಾಗಿ ಕಾಳಜಿ, ಅನುಶಾಸನ, ಸಂಯಮ ಇತ್ಯಾದಿ ಗುಣಗಳು ನಿರೋಗಿ ಸಮಾಜ ಸುಧಾರಣೆಗೆ ಪೋಷಕವಾಗಿವೆ. ಇವುಗಳನ್ನು ಆಚರಿಸುವ ವ್ಯಕ್ಯಿಯು ನಿಜವಾದ ಧಾರ್ಮಿಕ ಜೀವಿ. ಈ ಗುಣಗಳನ್ನು ಉಜ್ವಲವಾಗಿ ಪ್ರಕಟಪಡಿಸುವ ಜೀವಿಗಳು ಕೀರ್ತಿವಂತರಾಗಿರುತ್ತಾರೆ.

ಪ್ರಶ್ನೆಗಳು :

(i) _____ (ii) _____

(iii) _____ (iv) _____

(v) _____

ಅಥವಾ

ಅನುವಾದ ಲೇಖನ :

ಈ ಕೆಳಗಿನ ಆಂಗ್ಲ ಪದಗಳನ್ನು ಕನ್ನಡದಲ್ಲಿ ಅನುವಾದಗೊಳಿಸಿರಿ.

(1) Evening (2) Shadow

(3) Little (4) Battle

(5) Poet (6) Sound

(7) Stop (8) Popular

(9) Thinking (10) Beautiful

◆◆◆